## ವಾರ್ತಾ ವಿಶ್ಲೇಷಣೆ

### ನೀರಿಗಾಗಿ ಕಣ್ಣೀರು

ಇಂದು ನೀರಿನ ಬಗ್ಗೆ ಸುದ್ದಿಯ ಪ್ರವಾಹವೇ ಹರಿಯುತ್ತಿದೆ. ಎಲ್ಲ ಪತ್ರಿಕೆಗಳಲ್ಲಿಯೂ ಅದೇ ವಿಷಯ. ಎಲ್ಲರ ಬಾಯಲ್ಲೂ ಅದೇ ಮಾತು. ಅದಕ್ಕಾಗಿಯೇ ಪರದಾಟ ಹೊಡೆದಾಟಗಳೂ ನಡೆಯುತ್ತಿವೆ. ಈ ರೀತಿ ಹೊಡೆದಾಟಗಳಿಂದ ಸುಸ್ತಾಗಿ ಬಾಯಾರಿಕೆಯಾದರೆ ಕುಡಿಯುವುದಕ್ಕೆ ನೀರೇ ಇಲ್ಲ. ಆದರೂ ಹೊಡೆದಾಟ ನಿಲ್ಲದು. ಈಗ ನೀರನ್ನು ತರಕಾರಿಯಂತೆ ಮನೆಮನೆಗೆ ಮಾರಾಟ ಮಾಡುವ ಸ್ಥಿತಿ ಬಂದಿದೆ. ಹಣ ಮಾಡುವವರಿಗೆ ಇದೊಂದು ಸುಗ್ಗಿ. ಕೆಲವು ವರ್ಷಗಳ ಹಿಂದೆ ನೀರನ್ನು ಈ ರೀತಿ ಮಾರಲಾಗುತ್ತದೆ ಎಂದು ಊಹಿಸುವುದಕ್ಕೂ ಅಸಾಧ್ಯವಾಗಿತ್ತು. ಊಹಾತೀತ ವೈಜ್ಞಾನಿಕ ಪ್ರಗತಿ ಆಗುತ್ತಿರುವಂತೆ, ಊಹಾತೀತ ಅನಾಹುತಗಳೂ ಸಂಭವಿಸುತ್ತಿವೆ.

ಜನಸಂದಣಿ ವೃದ್ಧಿಯಾದಂತೆ, ನಗರಗಳು ಬೆಳೆದಂತೆ ಜನರ ಬೇಡಿಕೆಗಳಿಗನುಸಾರವಾಗಿ ಕೈಗಾರಿಕೆಗಳು ಬೆಳೆದಂತೆ ನೀರಿನ ಆವಶ್ಯಕತೆಯೂ ಅಧಿಕವಾಗುತ್ತಿದೆ. ಆದರೆ ಅದರ ಲಭ್ಯತೆ ಕಡಮೆಯಾಗುತ್ತಿದೆ. ಇರುವ ನೀರನ್ನೂ ನಾವು ಮಲಿನಗೊಳಿಸಿ ಅದರ ಉಪಯುಕ್ತತೆಯನ್ನೂ ನಾಶಮಾಡುತ್ತಿದ್ದೇವೆ. ಅತಿಬಳಕೆಯಿಂದ ನೀರಿನ ಮಟ್ಟ ಕೆಳಗಿಳಿಯುತ್ತಿರುವದರಿಂದ ಮತ್ತು ಸಮುದ್ರದ ಮಾಲಿನ್ಯದಿಂದಲೂ ಅಂತರ್ಜಲನಿಧಿ ಭಯವನ್ನು ಹುಟ್ಟಿಸುವಷ್ಟು ಕಡಿಮೆಯಾಗುತ್ತಿದೆಯೆಂದು ಸಂಯುಕ್ತಸಂಸ್ಥೆ ವರದಿ ಮಾಡಿದೆ. ಎರಡು ಬಿಲಿಯನ್ ಜನರು ಕುಡಿಯುವ ನೀರಿಗಾಗಿ ಮತ್ತು ನೀರಾವರಿಗಾಗಿ ಈ ಅಂತರ್ಜಲವನ್ನು ಅವಲಂಬಿಸಿರುವರಂತೆ. ಶೇಕಡ ೪೦ ಭಾಗ ವ್ಯವಸಾಯ ಈ ಅಂತರ್ಜಲವನ್ನು ಅವಲಂಬಿಸಿದೆಯಂತೆ.

ಅಸಂಖ್ಯ ವರ್ಷಗಳಿಂದ ಭೂಮಿ ತನ್ನ ಗರ್ಭದಲ್ಲಿ ಹಿಡಿದಿರಿಸಿಕೊಂಡಿದ್ದ ಜಲನಿಧಿಯನ್ನು ನಾವೀಗ ಖಾಲಿ ಮಾಡುತ್ತಿದ್ದೇವೆ. ನಮ್ಮ ಸಾವನ್ನೇ ನಾವು ಆಹ್ವಾನಿಸುತ್ತಿದ್ದೇವೆ. ಅತಿಯಾದ ಲೋಭ, ಜಾಗತಿಕ ದೃಷ್ಟಿಕೋನದ ಕೊರತೆ, ಅಂತರ ಮಾನವ ಸಂಬಂಧಗಳ ಕ್ಷೀಣತೆ—ಇವೇ ಇಂತಹ ದುಸ್ಥಿತಿಗೆ ಕಾರಣ. ನಾಗರಿಕತೆ ಬೆಳೆದಷ್ಟೂ ಲೋಭ ಕಡಮೆಯಾಗಬೇಕಿತ್ತು, ಜಾಗತಿಕ ದೃಷ್ಟಿಕೋನ ವೃದ್ಧಿಸಬೇಕಿತ್ತು ಮತ್ತು ಅಂತರ ಮಾನವ ಸಂಬಂಧ ಉತ್ತಮವಾಗಬೇಕಿತ್ತು. ಒಟ್ಟಿನಲ್ಲಿ ಸಂಸ್ಕೃತಿಯ ವೃದ್ಧಿಯಾಗದೆ ಕೇವಲ ನಾಗರಿಕತೆಯ ವೃದ್ಧಿಯಾದರೆ ಮಾನವ ಜನಾಂಗ ವಿನಾಶದ ಹಾದಿಯನ್ನು ಹಿಡಿಯುತ್ತದೆ. ಇಲ್ಲಿ ವಿವೇಕಾನಂದರ ವಾಣಿಯನ್ನು ನಾವು ಸ್ಮರಿಸಿಕೊಳ್ಳಬಹುದು: 'ಸಂಸ್ಕೃತಿ ಮಾತ್ರವೇ ಆಘಾತವನ್ನು ತಡೆಯಬಲ್ಲದು, ಕೇವಲ ಜ್ಞಾನರಾಶಿಯಲ್ಲ. ನಾಗರಿಕತೆಯಂತೆ ಜ್ಞಾನವೂ ಚರ್ಮದಾಳ. ಸ್ವಲ್ಪ ಕೆರೆದರೆ ಸಾಕು, ಹಳೆಯ ರಾಕ್ಷಸ ಹೊರಬರುತ್ತಾನೆ." ಈ ರಾಕ್ಷಸತ್ವವನ್ನು ಹೋಗಲಾಡಿಸಲು ಕೇವಲ ಸಾಕ್ಷರತೆ ಸಾಲದು, ಸಂಸ್ಕೃತಿಯನ್ನು ನೀಡಲೇಬೇಕು. ❖

### ಆತ್ಮಹತ್ಯೆಗೂ ಜೊತೆ ಬೇಕೆ ?

ಮಾನವನು ಸಂಘಜೀವಿ. ಅವನು ಜೊತೆಯಾಗಿ ಬಾಳಲು ಇಷ್ಟಪಡುತ್ತಾನೆ, ಒಂಟಿತನವನ್ನು ಇಷ್ಟಪಡುವುದಿಲ್ಲ. ಅವನಿಗೆ ಕೆಲಸ ಮಾಡುವಾಗಲೂ ಜೊತೆ ಬೇಕು, ಪ್ರಯಾಣದಲ್ಲೂ ಜೊತೆ ಬೇಕು, ಊಟಮಾಡುವಾಗಲೂ ಜೊತೆ ಇದ್ದರೆ ಚೆನ್ನ. ಆದರೆ ಸಾಯುವಾಗಲೂ ಜೊತೆ ಬೇಕೆ? ಎಲ್ಲ ಕಂಪನಿಯನ್ನು ಬಿಟ್ಟುಹೋಗುವಾಗಲೂ ಜೊತೆ ಬೇಕೆ? ಇಂದಿನ ಕಂಪ್ಯೂಟರ್ ಯುಗ ಈ ಸೌಲಭ್ಯವನ್ನೂ ಒದಗಿಸಿಕೊಟ್ಟಿದೆ. ಟೋಕಿಯೋದ ವಿದ್ಯಾರ್ಥಿಯೊಬ್ಬನು ಆತ್ಮಹತ್ಯೆ ಮಾಡಿಕೊಳ್ಳಬೇಕಾಗಿತ್ತು. ಅವನು ಇಂಟರ್‌ನೆಟ್ ಮೂಲಕ ತನ್ನ ಬಯಕೆಯನ್ನು ಪ್ರಸಾರ ಮಾಡಿದ. ಅವನಿಗೆ ಇಬ್ಬರು ಜೊತೆಗೆ ದೊರಕಿದರು. ಎರಡು ವಾರಗಳ ನಂತರ ಈ ಮೂವರ ಮೃತದೇಹ ದೊರಕಿತು. ಜಪಾನಿನಲ್ಲಿ ಪ್ರತಿ ವರ್ಷ ೩೦,೦೦೦ ಯುವಕರು ಆತ್ಮಹತ್ಯೆ ಮಾಡಿಕೊಳ್ಳುತ್ತಾರಂತೆ. ಒಂದೇ ರೀತಿ ಆತ್ಮಹತ್ಯೆ ಮಾಡಿಕೊಂಡು ಅವರಿಗೂ ಬೇಜಾರಾಗಿರಬೇಕು. ಅದಕ್ಕೇ ಹೊಸ ಹೊಸ ವಿಧಾನಗಳನ್ನು ಕಂಡುಹಿಡಿಯುತ್ತಿದ್ದಾರೆ. ಈಗ ಇಂಟರ್‌ನೆಟ್ ಸೌಲಭ್ಯವನ್ನು ಉಪಯೋಗಿಸಿಕೊಂಡು Suicide Site (ಆತ್ಮಹತ್ಯೆಯ ಸೈಟ್)ಗಳನ್ನು ಪ್ರಾರಂಭಿಸಿದ್ದಾರಂತೆ. ಇದರ ಮೂಲಕ ಬೇರೆ ಆತ್ಮಹತ್ಯೆ ಮಾಡಿಕೊಳ್ಳುವವರ ಸಂಪರ್ಕವನ್ನು ಪಡೆದು, ಮುಂದೆ ಅವರೆಲ್ಲ ಒಟ್ಟಿಗೆ ಕಲೆತು ಆತ್ಮಹತ್ಯೆ ಮಾಡಿಕೊಳ್ಳುತ್ತಾರಂತೆ. ಜೀವನದಲ್ಲಿ ಸಂಧಿಸದವರು ಮರಣದಲ್ಲಿ ಸಂಧಿಸುತ್ತಾರೆ!

ಈ ರೀತಿ ಆತ್ಮಹತ್ಯೆ ಮಾಡಿಕೊಳ್ಳುವವರು ನಿರುದ್ಯೋಗಿಗಳೇನಲ್ಲ, ಬಡತನದ ಬೇಗುದಿಯಿಂದ ಬಳಲುವವರಲ್ಲ, ಮಾನಹಾನಿಗೆ ಒಳಗಾದವರೂ ಅಲ್ಲ—ಜೀವನದ ಎಲ್ಲ ಸುಖಸೌಲಭ್ಯಗಳಿರುವವರು. ಆದರೂ ಜೀವನ ಬೇಸರವಾಗುವುದೇಕೆ? ಜೀವನದಲ್ಲಿ ಒಂದು ಅರ್ಥವನ್ನು ಕಂಡುಕೊಳ್ಳದಿರುವುದೇ ಇದಕ್ಕೆ ಕಾರಣವಿರಬೇಕು. ನಾವು ಅರ್ಥಾ(ಧನಾ)ನ್ವೇಷಣೆಯಲ್ಲಿ ಅರ್ಥವನ್ನೇ ಕಳೆದುಕೊಳ್ಳುತ್ತಿದ್ದೇವೆ. ಇನ್ನೊಂದು ಮುಖ್ಯಕಾರಣ ಮಾನವೀಯ ಸಂಬಂಧಗಳ ಕೊರತೆ. ಇಂದಿನ ಟಿ.ವಿ. ಮತ್ತು ಐ.ಟಿ. ಯುಗದಲ್ಲಿ ಇ-ಸಂಪರ್ಕ (ಎಲೆಕ್ಟ್ರಾನಿಕ್ ಸಂಪರ್ಕ) ಬಹಳಷ್ಟು ಇದ್ದು ಮಾನವೀಯ ಸಂಪರ್ಕ ಕಡಿಯುತ್ತಿದೆ. ಇದರಿಂದ ಒಂಟಿತನದ ನೋವು ಅಧಿಕವಾಗುತ್ತಿದ್ದು, ಸಾವಿನಲ್ಲಾದರೂ ಜೊತೆಗೂಡಬೇಕೆಂದು ಬಯಸುತ್ತಿರಬಹುದು. 'ಆತ್ಮಹತ್ಯೆಯೆಂಬುದು ತಾತ್ಕಾಲಿಕ ಸಮಸ್ಯೆಗೆ ಶಾಶ್ವತ ಪರಿಹಾರ"(*Suicide is a permanent solution to a temporary problem*) ಎಂದು ಅಬಿಗೈಲ್ ವಾನ್ ಬ್ಯೂರೆನ್ ಎಂಬುವವರು ಹೇಳುತ್ತಾರೆ. ನಾವು ಜೀವನವನ್ನು ಪ್ರೀತಿಸುವುದನ್ನು ಕಲಿಯಬೇಕು. ಇದೊಂದು ಅಮೂಲ್ಯವಾದ ಕೊಡುಗೆ ಎಂಬುದನ್ನು ಮರೆಯಬಾರದು. ಇಂಥ ಅಮೂಲ್ಯವಾದುದನ್ನು ಕಳೆದುಕೊಂಡರೆ ಅದಕ್ಕಾಗಿ ಪರಿತಪಿಸುವುದಕ್ಕೂ ನಾವಿರುವುದಿಲ್ಲವಲ್ಲ! ❖